<u>ಸಿಸಿ ಸಂಖ್ಯೆಃ **-668/2022**</u> <u>ಪಿ.ಡಬ್ಲ್ಯೂ.**:-1**</u>

ದಿನಾಂಕಃ **12-12-2024** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ಆರೋಪಿ ಪರ ವಕೀಲರಿಂದ :-</u>

ನಾನು ಪ್ರಾಚಾರ್ಯರಾಗಿ ಕೆಲಸ ಮಾಡುತ್ತಿರುವ ಬಗ್ಗೆ ಮತ್ತು ಸಂಬಳದ ಲೆಕ್ಕ ಪತ್ರವನ್ನು ವೈಯಕ್ತಿಕವಾಗಿ ಇಟ್ಟುಕೊಂಡಿರುವುದಿಲ್ಲ. ನನ್ನ ಸಂಬಳವನ್ನು ನಾನು ನಗದಾಗಿ ಪಡೆದುಕೊಳ್ಳುತ್ತಿದ್ದೆ ಬ್ಯಾಂಕ್ ಖಾತೆಯ ಮೂಲಕ ಪಡೆದುಕೊಳ್ಳುತ್ತಿರಲಿಲ್ಲ. ನಾನು ಕೆಲಸಕ್ಕೆ ದಿಃ 07-06-2019 ರಂದು ಸೇರಿದ್ದು, ದಿಃ 01-01-2020 ರಂದು ನಾನು ಕೆಲಸವನ್ನು ಬಿಟ್ಟಿರುತ್ತೇನೆ. ನಾನು ಕೆಲಸವನ್ನು ಬಿಟ್ಟಿರುವ ಬಗ್ಗೆ ಶಾಲೆಯ ಆಡಳಿತ ಮಂಡಳಿಯವರು ಯಾವುದೇ ಬಿಡುಗಡೆ ಪತ್ರವನ್ನು ಕೊಟ್ಟಿರುವುದಿಲ್ಲ. ಆದ ಕಾರಣ ಹಾಜರುಪಡಿಸಿರುವುದಿಲ್ಲ. ಶಾಲಾ ಆಡಳಿತ ಮಂಡಳಿಯವರನ್ನು ಬಿಡುಗಡೆ ಪತ್ರ ಕೊಡುವಂತೆ ಲಿಖಿತವಾಗಿ ಕೇಳಿರಲಿಲ್ಲ. ಮೌಖಿಕವಾಗಿ ಕೇಳಿರುತ್ತೇನೆ. ನಾನು ಆರೋಪಿಯ ಶಾಲೆಯಲ್ಲಿ 2 ವರ್ಷಗಳ ಕಾಲ ಕೆಲಸ ಮಾಡಿದ್ದೆನು. ನನ್ನನ್ನು ಶಾಲೆಯಲ್ಲಿ 1 ವರ್ಷದ ಗುತ್ತಿಗೆಯ ಆದಾರದ ಮೇಲೆ ನೇಮಕ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಪೀರ್ಯಾಧಿಯಲ್ಲಿ ನಾನು 12 ತಿಂಗಳ ಅವಧಿಯ ನಂತರ ನನ್ನ ಸೇವಾ ಅವಧಿಯನ್ನು ಮುಂದುವರೆಸಲು ನವೀಕರಣಗೊಳಿಬೇಕೆಂದು ನಮೂದಾಗಿದೆ ಎಂದರೆ ಸರಿ. ನನ್ನ ಸೇವಾ ಅವಧಿ ಮುಗಿದ ನಂತರ ಆರೋಪಿಯನ್ನು ನವೀಕರಣಗೊಳಿಸಿಕೊಡುವಂತೆ ಕೇಳಿರುತ್ತೇನೆ ಆದರೆ ನವೀಕರಣ ಮಾಡಿಕೊಟ್ಟಿರುವುದಿಲ್ಲ. ನನ್ನ ಸೇವಾ ಅವಧಿಯನ್ನು ನವೀಕರಣ ಮಾಡಿಕೊಡುವಂತೆ ಲಿಖಿತ ಪತ್ರವನ್ನು ಸಲ್ಲಿಸಿರುತ್ತೇನೆ. ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ಸೇವಾ ಅವಧಿಯನ್ನು ನವೀಕರಣ ಮಾಡುವಂತೆ ಪತ್ರವನ್ನು ಯಾವ ದಿನಾಂಕದಂದು ಕೊಟ್ಟಿದ್ದೇನೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಪೀರ್ಯಾಧಿಯಲ್ಲಿ ನಮೂದಾಗಿರುವ ರೂ.3,02,000/- ಯಾವ ವರ್ಷ ಯಾವ ತಿಂಗಳಿನಿಂದ, ಯಾವ ವರ್ಷ ಯಾವ ತಿಂಗಳವರೆಗಿನ ಸಂಬಳ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ನನ್ನ ಪೀರ್ಯಾಧಿನಲ್ಲಾಗಲೀ ಅಥವಾ ಕಾನೂನು ತಿಳುವಳಿಕೆ ಪತ್ರದಲ್ಲಾಗಲೀ ಅಥವಾ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಾಗಲೀ ಆರೋಪಿಯು ಯಾವ ವರ್ಷ ಯಾವ ತಿಂಗಳಿನಿಂದ, ಯಾವ ವರ್ಷ ಯಾವ ತಿಂಗಳವರೆಗಿನ ಸಂಬಳ ಎಂದು

ನಿಖರವಾಗಿ ನಮೂದಾಗಿಲ್ಲ ಎಂದರೆ ಸರಿ. ನನ್ನ ಪೀರ್ಯಾಧಿಯಲ್ಲಿ ನಮೂದಾಗಿರುವಂತೆ ಆರೋಪಿಯು ರೂ.76,000/- ಹಣವನ್ನು ಕೊಟ್ಟಿದ್ದಾರೆ. ನನ್ನ ಮತ್ತು ಆರೋಪಿಯ ಶಾಲೆಯ ನಡುವೆ ಕೇವಲ 12 ತಿಂಗಳ ಕಾಲಾವಧಿ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಕಾನೂನು ತಿಳುವಳಿಕೆ ಪತ್ರದ 2 ನೇ ಪ್ಯಾರಾದಲ್ಲಿ "after completion of the term agreement" ಎಂದರೆ 2 ವರ್ಷಗಳ ಕಾಲಾವಧಿಯಾಗಿರುತ್ತದೆ. ನಾನು ಸಲ್ಲಿಸಿದ 2 ವರ್ಷಗಳ ಕಾಲಾವಧಿಯಲ್ಲಿ ಕೇವಲ 2 ತಿಂಗಳ ಸಂಬಂಳವನ್ನು ಮಾತ್ರ ಪಡೆದುಕೊಂಡಿದ್ದೇನೆ. ನನಗೆ 8 ತಿಂಗಳ ಸಂಬಳದ ಹಣವನ್ನು ಆರೋಪಿ ಕೊಡಬೇಕು ಅಂದರೆ 01-08-2019 ರಿಂದ 01-03-2020 ರವರೆಗೆ ಕೊಡಬೇಕು. ಸಾಕ್ಷಿಯು ಮುಂದುವರೆದು ಶಾಲೆಯ ಆಡಳಿತ ಮಂಡಳಿಯವರು ಮೇಲಾಧಿಕಾರಿಗಳು ಬಂದರೆ ತೋರಿಸುವ ಸಲುವಾಗಿ ನಮ್ಮಿಂದ ಶಾಲೆಯ ದಾಖಲಾತಿಗಳಲ್ಲಿ ಸಹಿಯನ್ನು ಪಡೆದುಕೊಳ್ಳುತ್ತಿದ್ದರು. ಮೇಲ್ಕಂಡ ವಿಷಯವನ್ನು ನನ್ನ ಪೀರ್ಯಾಧಿನಲ್ಲಾಗಲೀ ಅಥವಾ ಕಾನೂನು ತಿಳುವಳಿಕೆ ಪತ್ರದಲ್ಲಾಗಲೀ ಅಥವಾ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಾಗಲೀ ನಮೂದು ಮಾಡಿಲ್ಲ ಎಂದರೆ ಸರಿ. ತಿಳುವಳಿಕೆ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ಸ್ವಲ್ಪಮಟ್ಟಿಗೆ ಗೊತ್ತು. ನನಗೆ ಶಾಲೆಯ ಆಡಳಿತ ಮಂಡಳಿಯ ಯಾವುದೇ ಹೊಣೆಗಾರಿಕೆ ಇರುವುದಿಲ್ಲ. ನಾನು ಸಲ್ಲಿಸಿದ ದಸ್ತಾವೇಜಿನ ಪಟ್ಟಿಯಲ್ಲಿ ಕ್ರ.ಸಂ.9 ನ್ನು ಕೈ ಬರವಣಿಗೆಯಿಂದ ಬರೆದಿದೆ ಎಂದರೆ ಸರಿ. ನಿಪಿ-14 ಪ್ರಮಾಣ ಪತ್ರವನ್ನು ನಾನು ಹಾಜರುಪಡಿಸಿದ್ದೇನೆ. ನಿಪಿ-14 ಪ್ರಮಾಣ ಪತ್ರದಲ್ಲಿ ನನ್ನ ಸೇವಾ ಅವಧಿ 07-06-2019 ರಿಂದ 01-01-2021 ಎಂದು ನಮೂದಾಗಿದೆ ಎಂದರೆ ಸರಿ. ನಿಪಿ-14 ರಲ್ಲಿ ನಮೂದಾಗಿರುವ ಸೇವಾ ಅವಧಿ ಸರಿ ಇರುತ್ತದೆ. ನಿಪಿ-14 ರ ಪ್ರಕಾರ ನನ್ನ ಸೇವಾ ಅವಧಿ 19 ತಿಂಗಳು ಆಗುತ್ತದೆ ಎಂದರೆ ಸರಿ. ನಿಪಿ-15 ದಾಖಲೆಯಲ್ಲಿ ಯಾವ ದಿನಾಂಕದಂದು ನೀಡಿದ ಬಗ್ಗೆ ನಮೂದಾಗಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಶಾಲೆಯ ಆಡಳಿತ ಮಂಡಳಿಯಲ್ಲಿ ಪತ್ರ ವ್ಯವಹಾರಗಳನ್ನು ಮಾಡಿದ ಬಗ್ಗೆ ಮತ್ತು ಸ್ವೀಕರಿಸಿದ ಬಗ್ಗೆ ಆವಕ-ಜಾವಕ ವಹಿ ಇರುತ್ತದೆ ಎಂದರೆ ಸರಿ. ನಿಪಿ-14 ಮತ್ತು 15 ದಾಖಲೆಯಲ್ಲಿ ನೀಡಿದ ಬಗ್ಗೆ ಸಂಖ್ಯೆ ಮತ್ತು ದಿನಾಂಕ ನಮೂದಾಗಿರುವುದಿಲ್ಲ ಎಂದರೆ ಸರಿ. ನಿಪಿ-14 ಮತ್ತು 15 ದಾಖಲೆಯನ್ನು ಡಿಸೆಂಬರ್ 2021 ನೇ ಸಾಲಿನಲ್ಲಿ ಕೊಟ್ಟಿರುತ್ತಾರೆ. ಆದರೆ ನಿರ್ದಿಷ್ಟವಾದ ದಿನಾಂಕ ನನಗೆ ನೆನಪಿರುವುದಿಲ್ಲ. ನಿಪಿ-14 ಮತ್ತು 15 ದಾಖಲೆಗಳನ್ನು ನನ್ನ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-14 ಮತ್ತು 15 ರಂತೆ ನಾನು ಆರೋಪಿಯ ಶಾಲೆಯಲ್ಲಿ 19 ತಿಂಗಳ ಕಾಲ ಮತ್ತು ಸುಮಾರು 2 ವರ್ಷಗಳ ಕಾಲ ಕೆಲಸ ನಿರ್ವಹಿಸಿದ ಬಗ್ಗೆ ನನ್ನ ಪೀರ್ಯಾಧಿನಲ್ಲಾಗಲೀ ಅಥವಾ ಕಾನೂನು

ತಿಳುವಳಿಕೆ ಪತ್ರದಲ್ಲಾಗಲೀ ಅಥವಾ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಾಗಲೀ ನಮೂದು ಮಾಡಿರುವುದಿಲ್ಲ. ನಾನು ಕೆಲಸವನ್ನು ಬಿಡುವ ಸಮಯದಲ್ಲಿ ರಾಜಿನಾಮೆ ಪತ್ರವನ್ನು ಸಲ್ಲಿಸಿದ್ದೇನೆ. ಆದರೆ ರಾಜೀನಾಮೆ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಎಸ್ ಬಿ ಐ ಬ್ಯಾಂಕ್ ನ ಕೂಲಂಬಿಯ ಶಾಖೆಯಲ್ಲಿ ನನ್ನ ಬ್ಯಾಂಕ್ ಖಾತೆ ಇರುತ್ತದೆ. ನನ್ನ ಖಾತೆಯ ಸ್ಟೇಟ್ ಮೆಂಟ್ ಆಫ್ ಅಕೌಂಟನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ದಿಃ 24-06-2019 ರಂದು ಆರೋಪಿಯ ಖಾತೆಯಿಂದ ನನ್ನ ಖಾತೆಗೆ ರೂ.20,000/- ಜಮಾ ಆಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆರೋಪಿಗೆ ನಾನು ಇ ಎಂ ಐ ಆದಾರದ ಮೇಲೆ ಲ್ಯಾಪ್ ಟಾಪ್ ಮತ್ತು ಮೊಬೈಲನ್ನು ಕೊಡಿಸಿದ್ದೆನು. ಅದಕ್ಕೆ ಸಂಬಂಧಿಸಿದ ಹಣವನ್ನು ಜಮಾ ಮಾಡಿದ್ದಾರೆ ಎಂದು ನುಡಿಯುತ್ತಾರೆ. ದಿಃ 09-07-2019 ರಂದು ಆರೋಪಿಯ ಖಾತೆಯಿಂದ ನನ್ನ ಖಾತೆಗೆ ರೂ.38,000/- ಜಮಾ ಆಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆದರೆ ಸದರಿ ಹಣವು ನನ್ನ ಸಂಬಳಕ್ಕೆ ಸಂಬಂಧ ಪಟ್ಟಿದ್ದಲ್ಲ ಎಂದು ನುಡಿಯುತ್ತಾರೆ. ದಿಃ 19-08-2019 ರಂದು ರೂ.80,630/- ಆರೋಪಿಯ ಖಾತೆಯಿಂದ ನನ್ನ ಖಾತೆಗೆ ಜಮಾ ಆಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಪುಸ್ತಕಗಳನ್ನು ಖರೀದಿ ಸಂಬಂಧಿಸಿದ ಹಣ ಎಂದು ನುಡಿಯುತ್ತಾರೆ. ದಿಃ 11-09-2019 ರಂದು ರೂ.52,106/-, ದಿಃ 17-06-2020 ರಂದು ರೂ.50,000/- ಆರೋಪಿಯ ಖಾತೆಯಿಂದ ನನ್ನ ಖಾತೆಗೆ ಜಮಾ ಆಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಹಣವು ನನ್ನ ಸಂಬಳಕ್ಕೆ ಸಂಬಂಧ ಪಟ್ಟಿದ್ದಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಆರೋಪಿಯ ಖಾತೆಯ ಸ್ಟೇಟ್ ಮೆಂಟ್ ಆಫ್ ಅಕೌಂಟನ್ನು ನೋಡಿ ಒಪ್ಪಿಕೊಂಡಿದ್ದು ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ನನ್ನ ಮೊಬೈಲ್ ನಂ.9108620574 ಆಗಿರುತ್ತದೆ. ದಿಃ 04-02-2020 ರಂದು ಆರೋಪಿಯು ಗೂಗಲ್ ಪೇ ಮೂಲಕ ರೂ.4,300/-, ದಿಃ 08-09-2021 ರಂದು ರೂ.25,000/-, ದಿಃ 11-10-2021 ರಂದು ರೂ.15,000/- ಹಣವನ್ನು ಜಮಾ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಹಣವು ಶಾಲೆಯ ಬಸ್ ಗಳಿಗೆ ಡಿಸೇಲ್ ಮತ್ತು ಬಸ್ ನ ನಿರ್ವಹಣೆ ಖರ್ಚಿಗೆ ಸಂಬಂಧಿಸಿದ್ದು ಎಂದು ನುಡಿಯುತ್ತಾರೆ. ದಿಃ 03-04-2020 ರಂದು ರೂ.3,000/- ದಿಃ 01-05-2020 ರಂದು ರೂ.2,000/-, ದಿಃ 30-05-2020 ರಂದು ರೂ.12,000/-, ದಿಃ 08-08-2020 ರಂದು ರೂ.10,000/- ಮತ್ತು ರೂ.2,000/-, ದಿಃ07-11-2020 ರಂದು ರೂ.3,000/- ಮತ್ತು ರೂ.2,100/-, ದಿಃ 25-11-2020 ರಂದು ರೂ.8,300/- ಮತ್ತು ದಿಃ 22-01-2021 ರಂದು

ರೂ.3,000/- ಹಣವನ್ನು ಫೋನ್ ಪೇ ಮೂಲಕ ನನಗೆ ವರ್ಗಾವಣೆ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಹಣದಲ್ಲಿ ಶಾಲೆಗೆ ಸಂಬಂಧಿಸಿದಂತೆ ಖರ್ಚು ವೆಚ್ಚ ಮಾಡಿ ಉಳಿದ ಹಣವನ್ನು ವಾಪಾಸ್ಸು ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ವರ್ಷಕ್ಕೆ ನನಗೆ 10 ದಿನಗಳ ಕಾಲ ಸಾಂದರ್ಭಿಕ ರಜೆ ಇರುತ್ತದೆ ಎಂದರೆ ಸರಿ. 10 ದಿನಗಳ ಸಾಂದರ್ಭಿಕ ರಜೆ ಮುಗಿದ ನಂತರ ಕೆಲಸಕ್ಕೆ ಗೈರು ಹಾಜರಾದರೆ ರೂ.1,225/- ಹಣವನ್ನು ಕಡಿತ ಮಾಡುತ್ತಾರೆ ಎಂದರೆ ಸರಿ. ಸಾಕ್ಷಿಯು ಆರೋಪಿಯ ಶಾಲೆಯಲ್ಲಿ ಸಂಬಳದ ಖಾತೆಯ ಪುಸ್ತಕದಲ್ಲಿ ಬರವಣಿಗೆ ಮತ್ತು ಸಹಿಯನ್ನು ಸಾಕ್ಷಿ ನೋಡಿ ಒಪ್ಪಿಕೊಂಡಿದ್ದು ಶಾಲೆಯ ಅಕೌಂಟ್ ಪುಸ್ತಕದ ಮುಖ್ಯ ಪುಟವನ್ನು ನಿಡಿ-2 ಎಂದು ಮತ್ತು ಪೀರ್ಯಾಧಿಯ ಸಂಬಳಕ್ಕೆ ಸಂಬಂಧಿಸಿದಂತೆ ಆದ ಬರವಣಿಗೆ ಮತ್ತು ಸಹಿಯನ್ನು ನಿಡಿ-2(ಎ) ಎಂದು ಗುರುತಿಸಲಾಯಿತು. ಶಾಲೆಯ ಆಡಳಿತ ಮಂಡಳಿಯ ನಿರ್ವಹಣೆಗೋಸ್ಕರ ಶಾಲೆಯ ಆಡಳಿತ ಮಂಡಳಿಯವರು ಬೇರೆ ಕಡೆ ಹೋದ ಸಮಯದಲ್ಲಿ ಸಹಿ ಮಾಡಿದ ಖಾಲಿ ಚಕ್ಕುಗಳನ್ನು ಮತ್ತು ಲೆಟರ್ ಪ್ಯಾಡ್ ಗಳನ್ನು ಶಾಲೆಯಲ್ಲಿ ಇಟ್ಟುಹೋಗುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿಯು ಶಾಲೆಯಲ್ಲಿ ಸಹಿ ಮಾಡಿ ಇಟ್ಟು ಹೋಗಿದ್ದ ಖಾಲಿ ಚಕ್ಕುಗಳನ್ನು ಮತ್ತು ಲೆಟರ್ ಪ್ಯಾಡ್ ಗಳನ್ನು ಕಳ್ಳತನ ಮಾಡಿ ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ನ್ಯಾಯಾಲಯದಲ್ಲಿ ಪ್ರಕರಣವನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ರೂ.3,02,000/- ಹಣವನ್ನು ಆರೋಪಿಯು ನನಗೆ ಕಾನೂನಾತ್ಮಕವಾಗಿ ಕೊಡಬೇಕೆಂದು ತೋರಿಸಲು ನಿಪಿ-14 ಮತ್ತು 15 ದಾಖಲೆಯನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಿಪಿ-14 ಮತ್ತು 15 ದಾಖಲೆಗಳನ್ನು ನಾನು ಈ ಪ್ರಕರಣಕ್ಕೋಸ್ಕರ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ನಾನು ಈ ಪ್ರಕರಣದಲ್ಲಿ ವೈಯಕ್ತಿಕವಾಗಿ ಮತ್ತು ಪದನಿಮಿತ್ತವಾಗಿ ಆರೋಪಿಯನ್ನಾಗಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ನನಗೆ ವೈಯಕ್ತಿಕವಾಗಿ ಯಾವುದೇ ಹಣವನ್ನು ಕೊಡಲು ಭಾಧ್ಯಸ್ಥರಾಗಿರುವುದಿಲ್ಲ ಶಾಲೆಯ ಆಡಳಿತ ಮಂಡಳಿಯ ಪರವಾಗಿ ಹಣವನ್ನು ಕೊಡಲು ಭಾಧ್ಯಸ್ಥರು ಎಂದು ನುಡಿಯುತ್ತಾರೆ. ಆರೋಪಿಯು ನಿಪಿ-1 ಚಕ್ಕಿನಲ್ಲಿ ನಮೂದಾಗಿರುವ ಹಣವನ್ನು ಕೊಡಲು ಕಾನೂನಾತ್ಮಕವಾಗಿ ಭಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನಿಪಿ-1 ಚಕ್ಕನ್ನು ನಾನು ಶಾಲೆಯ ಆಡಳಿತ ಮಂಡಳಿಯಿಂದ ಕಳ್ಳತನ ಮಾಡಿಕೊಂಡು ಅದರಲ್ಲಿನ ಒಕ್ಕಣೆಯನ್ನು ನಾನೇ ಬರೆದು ಸುಳ್ಳು ಪ್ರಕರಣವನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ನಿಪಿ-1 ರ ಚಕ್ಕಿನ ಹಣವನ್ನು ಅಥವಾ ಯಾವುದೇ ಹಣವನ್ನು ಕೊಡಲು ಕಾನೂನಾತ್ಮಕ ಭಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನಾನು ಇಲ್ಲಿಯವರೆಗೂ ಶಿಕ್ಷಣ

ಇಲಾಖೆಯವರಿಗೆ ಆರೋಪಿಯ ಶಾಲೆಯವರು ವೇತನ ನೀಡದಿದ್ದರೂ ವೇತನ ನೀಡಿದ್ದೇವೆ ಎಂದು ದಾಖಲಾತಿಗಳಿಗೆ ಸಹಿ ಮಾಡಿಸಿಕೊಂಡಿರುತ್ತಾರೆ ಎಂದು ಯಾವುದೇ ದೂರನ್ನು ಸಲ್ಲಿಸಿರುವುದಿಲ್ಲ. ಮೇಲ್ಕಂಡಂತೆ ಯಾವುದೇ ಘಟನೆ ನಡೆದಿರುವುದಿಲ್ಲ ಆದ ಕಾರಣ ಯಾವುದೇ ದೂರನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.